MEDITATE
आनन्दो ब्रह्म
SERVE REALIZE
LIVE HAPPILY FOUNDATION

Founded by
Paramapoojya Jagadguru Shankaracharya Sri Swayamprakasha
Sri Sachidananda Saraswathi Mahaswamiji
Sri Adishankaracharya Sharada Lakshminarasimha Peetam
Sreemath, Hariharapura 577 120

# ಚಿಂತನ ಪ್ರಕಾಶ

## ಸ್ಮರಣ ಸಂಚಿಕೆ

ಜನವರಿ 1, 2008 (ಹೊಸ ವರ್ಷಾದಿಯ ದಿನ)

## ಗುರುಗಳ ಜೊತೆ ಒಂದು ಸಂವಾದ ಸಂಜೆ

# ಭಾರತೀಯರ ಧರ್ಮ ಮತ್ತು ಸಂಸ್ಕೃತಿ

ಮಹಾಮಹೋಪಾಧ್ಯಾಯ
ವಿದ್ವಾನ್ ರಂಗನಾಥ ಶರ್ಮಾ, ಬೆಂಗಳೂರು

ಭಾರತೀಯರಿಗೆ ವೇದಗಳು ಆಧಾರ ಗ್ರಂಥಗಳು. ಇವುಗಳ ಆಧಾರದಿಂದಲೇ ನಮ್ಮ ಪೂರ್ವಜರು ತಮ್ಮನ್ನು ಪರಿಷ್ಕರಿಸಿಕೊಂಡು ನೆಮ್ಮದಿಯಿಂದ ಬಾಳಿದರೆಂದು ನಮ್ಮೆಲ್ಲರ ವಿಶ್ವಾಸವಾಗಿದೆ. ವೇದವನ್ನು ಪ್ರಮಾಣ ಗ್ರಂಥವೆಂದು ತಿಳಿಯಲು ಅದು ಬೋಧಿಸಿದ ಅತ್ಯುತ್ತಮವಾದ ಕರ್ಮ ಮಾರ್ಗವೂ ಜ್ಞಾನ ಮಾರ್ಗವೂ ಮುಖ್ಯ ಕಾರಣವಾಗಿದೆ. ಇದು ಶ್ರೇಷ್ಠವಾದ ಜೀವನ ಮಾರ್ಗವನ್ನು ಬೋಧಿಸಲು ಶ್ರೇಷ್ಠ ವ್ಯಕ್ತಿಯಿಂದ ಉಕ್ತವಾದದ್ದೇ ನಿಮಿತ್ತವಾಗಿದೆ. ಅಂತಹ ಶ್ರೇಷ್ಠ ವ್ಯಕ್ತಿಯು ಈಶ್ವರನೇ ಹೊರತು ಇನ್ನೊಬ್ಬನಲ್ಲ. ಆದ್ದರಿಂದ ಶ್ರೀಶಂಕರಾಚಾರ್ಯರು **'ನ ಹಿ ಈದೃಶಸ್ಯ ಶಾಸ್ತ್ರಸ್ಯ ಋಗ್ವೇದಾದಿ ಲಕ್ಷಣಸ್ಯ ಸರ್ವಜ್ಞಾದಿಗುಣಾನ್ವಿತಸ್ಯ ಸರ್ವಜ್ಞಾದನ್ಯತಃ ಸಂಭವೋಽಸ್ತಿ''** ಎಂದು ಹೇಳಿದ್ದಾರೆ. (ಸೂತ್ರ ಭಾಷ್ಯ 1-1-3).

**''ಋಗ್ವೇದಾದಿ ಶಾಸ್ತ್ರವು ಸರ್ವಾರ್ಥಪ್ರಕಾಶನ ಸಮರ್ಥವಾಗಿ ಸರ್ವಜ್ಞಸದೃಶವಾಗಿದೆ. ಇಂತಹ ವೇದವು ಸರ್ವಜ್ಞನಲ್ಲದೇ ಇನ್ನೊಬ್ಬನಿಂದ ಉತ್ಪನ್ನವಾಗಲಾರದು''** ಆದ್ದರಿಂದಲೇ ವೇದವು ಅಪೌರುಷೇಯವೆಂದು ನಮ್ಮ ಶಾಸ್ತ್ರಜ್ಞರು ಹೇಳಿದ್ದಾರೆ. ಅಪೌರುಷೇಯವೆಂದರೆ ಯಾವನೋ ಒಬ್ಬ ಮನುಷ್ಯನಿಂದ ನಿರ್ಮಿತವಾದದ್ದಲ್ಲ ಎಂದರ್ಥ. ನಮ್ಮ ಪ್ರಾಚೀನ ಋಷಿಗಳು ತಪಸ್ಸು ಮಾಡುತ್ತಾ ಸಮಾಧಿಸ್ಥರಾದಾಗ ಅವರ ಬಾಯಿಯಿಂದ ವೇದದ ನಾನಾ ಮಂತ್ರಗಳು ಹೊರಬಂದವು. ಆದ್ದರಿಂದ ಅಲ್ಲಲ್ಲಿ ವಾಮದೇವ ಋಷಿಃ, ವಿಶ್ವಾಮಿತ್ರ ಋಷಿಃ ಎಂಬ ಮಾತುಗಳು ಬರುತ್ತವೆ. ಋಷಿ ಎಂದರೆ ಆ ಮಂತ್ರದ ದ್ರಷ್ಟ್ಯ ಎಂದರ್ಥ. ಋಷಿಗಳು ಮಂತ್ರ ದ್ರಷ್ಟಾರರೇ ಹೊರತು ಕರ್ತಾರರಲ್ಲ.

ಈ ವೇದಗಳು ಮಾನವ ಜಾತಿಯ ಹಿತಕ್ಕಾಗಿ ಕೆಲವು ಕರ್ತವ್ಯ ಕರ್ಮಗಳನ್ನು ಉಪದೇಶಿಸುತ್ತವೆ. ಇದನ್ನೇ ನಾವು ಧರ್ಮ ಎನ್ನುತ್ತೇವೆ. ಈ ಧರ್ಮದ ಆಚರಣೆಯಿಂದ ಮನುಷ್ಯನು ಇಹದಲ್ಲಿ ಸುಖವಾಗಿದ್ದು ಪರದಲ್ಲಿ ಸದ್ಗತಿಯನ್ನು ಪಡೆಯುತ್ತಾನೆ ಎಂಬುದು ನಮ್ಮೆಲ್ಲರ ನಂಬಿಕೆಯಾಗಿದೆ.

**''ಯತೋಽಭ್ಯುದಯ ನಿಃಶ್ರೇಯಸಸಿದ್ಧಿಃ, ಸ ಧರ್ಮಃ''** ಎಂದು ಶಾಸ್ತ್ರಕಾರರು ಹೇಳಿದ್ದಾರೆ. ಯಾವುದರಿಂದ ಅಭ್ಯುದಯ ಮತ್ತು ನಿಃ ಶ್ರೇಯಸ್ಸು ಸಿದ್ಧಿಸುತ್ತದೆಯೋ ಅದು ಧರ್ಮ ಎಂದು ಅರ್ಥ. ಅಭ್ಯುದಯವೆಂದರೆ ಸುಖ ಭೋಗಗಳ ಪ್ರಾಪ್ತಿ, ನಿಃಶ್ರೇಯಸವೆಂದರೆ ಮೋಕ್ಷ, ಮನುಷ್ಯನ ಬಯಕೆಗಳು ಇವೇ ಆಗಿರುತ್ತವೆ. ಆದ್ದರಿಂದಲೇ ಧರ್ಮ, ಅರ್ಥ, ಕಾಮ, ಮೋಕ್ಷ ಇವು ನಾಲ್ಕು ಪುರುಷಾರ್ಥಗಳೆಂದು ಹೇಳಿದ್ದಾರೆ. ಸಾಮಾನ್ಯವಾಗಿ ಮನುಷ್ಯರೆಲ್ಲರೂ ಬಯಸುವುದು ಅರ್ಥ ಕಾಮಗಳನ್ನು, ಅರ್ಥವೆಂದರೆ ಹಣ ಮುಂತಾದ ಭೋಗ ಸಾಮಗ್ರಿ. ಕಾಮವೆಂದರೆ ಈ ಅರ್ಥದಿಂದ ದೊರೆಯುವ ನಾನಾ ಬಗೆಯ ಸುಖಭೋಗಗಳು. ಇವನ್ನು ಧರ್ಮದಿಂದಲೇ ದೊರಕಿಸಿಕೊಳ್ಳಬೇಕೆಂದು ಶಾಸ್ತ್ರವು ಉಪದೇಶಿಸುತ್ತದೆ. ನಿಃಶ್ರೇಯಸವೆಂದರೆ ಮೋಕ್ಷ, ಇದೇ ಪರಮ ಪುರುಷಾರ್ಥ. ಹೀಗೆ ಮನುಷ್ಯನ ಹಿತಗಳೆಲ್ಲವೂ ಧರ್ಮದಲ್ಲಿ ಅಡಗಿವೆ. ಧರ್ಮದ ನಾನಾ ಬಗೆಯ ಆಚರಣೆಗಳನ್ನು ವೇದೋಪನಿಷತ್ತುಗಳು, ಧರ್ಮಶಾಸ್ತ್ರಗಳು, ಪುರಾಣಗಳು ಬೋಧಿಸುತ್ತವೆ. ಈ ಆಚರಣೆಗಳ ಮೂಲವು ಜನರ ಸ್ಮರಣೆಯಲ್ಲಿ ಇಲ್ಲದಿದ್ದರೂ ನಡತೆಯಲ್ಲಿ ಪ್ರತಿಬಿಂಬಿಸಿಬಿಟ್ಟಿರುತ್ತವೆ. ಈ ನಡತೆಗಳನ್ನು ನಾವು ಭಾರತೀಯ ಸಂಸ್ಕೃತಿ ಎನ್ನುತ್ತೇವೆ.

ಸಂಸ್ಕೃತಿಯೆಂದರೆ ಈ ಧರ್ಮೋಪದೇಶಗಳಿಂದಾದ ಚಿತ್ತ ಸಂಸ್ಕಾರ. ಈ ಸಂಸ್ಕಾರವು ಪರಂಪರೆಯಿಂದ ಜನಜೀವನದಲ್ಲಿ ಹಾಸುಹೊಕ್ಕಾಗಿ ಸೇರಿಹೋಗಿವೆ. ಈ ಸಂಸ್ಕೃತಿಯು ನಮ್ಮ ದೃಷ್ಟಿಯಲ್ಲಿ ಅತ್ಯಂತ ಶ್ರೇಷ್ಠವಾದದ್ದು. ಇದನ್ನು ನಾವು ಅವಶ್ಯವಾಗಿ ಉಳಿಸಿಕೊಳ್ಳಬೇಕು. ಇದನ್ನು ಒಂದು ದೃಷ್ಟಾಂತದಿಂದ ಸ್ಪಷ್ಟೀಕರಿಸಬಹುದು.

ಭೃಗೋಪನಿಷತ್ತಿನಲ್ಲಿ ''**ಅತಿಥಿ ದೇವೋ ಭವ**'' ಎಂಬ ವಾಕ್ಯವಿದೆ. ಗುರುಕುಲದಿಂದ ನಿರ್ಗಮಿಸುವ ಶಿಷ್ಯನಿಗೆ ಆಚಾರ್ಯನು ಉಪದೇಶಿಸುವ ನೀತಿಮಾರ್ಗವಿದು. ಅತಿಥಿಯನ್ನು ದೇವರಂತೆ ಕಾಣತಕ್ಕವನಾಗು ಎಂದು ಈ ಮಾತಿನ ಅರ್ಥ. ಅತಿಥಿಯೆಂದರೆ ಪರಸ್ಥಳದಿಂದ ಬಂದಿರುವ ಆಶ್ರಯಾಪೇಕ್ಷಿಯಾದ ಒಬ್ಬ ಮನುಷ್ಯ. ಅವನು ಬಂಧುವಲ್ಲ, ಆಪ್ತಮಿತ್ರನೂ ಅಲ್ಲ, ಅಪರಿಚಿತ ಸ್ಥಳವಾದ್ದರಿಂದಲೋ ಅಥವಾ ಬೇರೆ ಕಾರಣದಿಂದಲೋ ಈತನು ಮನೆಯಲ್ಲಿ ತಂಗಲು ಬಂದವನು. ಅವನಿಗೆ ಊಟ ಉಪಚಾರಗಳನ್ನಿತ್ತು ಒಳ್ಳೆಯ ಮಾತಿನಿಂದ ಗೌರವಿಸುವುದು ಆತಿಥೇಯನ ಕರ್ತವ್ಯವಾಗಿದೆ. ಇದು ನಗರಗಳಲ್ಲಿ ಕಾಣೆಯಾದರೂ ಹಳ್ಳಿಗಳಲ್ಲಿ ಇನ್ನೂ ಉಳಿದುಕೊಂಡಿದೆ. ಅತಿಥಿಯು ಸಾಮಾನ್ಯವಾಗಿ ಮಧ್ಯಾಹ್ನ

ದಲ್ಲಿ ಅಥವಾ ಸಂಜೆ ಬರಬಹುದು. ಗೃಹಸ್ಥನು ಅತಿಥಿಯು ಬರಬಹುದೆಂಬ ಊಹೆಯಿಂದ ಮಧ್ಯಾಹ್ನದ ಊಟಕ್ಕೆ ಮೊದಲು ಹೊರಬಾಗಿಲನ್ನು ತೆರೆದು ಸ್ವಲ್ಪ ಹೊತ್ತು ಕಾಯ ಬೇಕೆಂದು ಶಾಸ್ತ್ರವಿಧಿಯಿದೆ. ಅದರಂತೆ ನಡೆದುಕೊಳ್ಳು ವವರು ಈಗಲೂ ಇದ್ದಾರೆ. ಹಾಗೆಯೇ ಸಂಜೆಯ ಹೊತ್ತು ಹೆಬ್ಬಾಗಿಲನ್ನು ತೆರೆದಿರಬೇಕೆಂದು, ದೀಪವನ್ನು ಹಚ್ಚ ಬೇಕೆಂದೂ ಹೇಳುವುದು ಅತಿಥಿಯ ಬರುವಿನ ನಿರೀಕ್ಷೆ ಯಿಂದಲೇ. ಹೀಗೆ ಬಂದ ಅತಿಥಿಯನ್ನು ಗೌರವದಿಂದ ಸತ್ಕರಿ ಸುವುದು ನಮ್ಮ ಸಂಸ್ಕೃತಿ. ಬಂದ ಅತಿಥಿಯನ್ನು ಸ್ವಾಗತಿಸಿ ಕುಳ್ಳಿರಿಸುತ್ತಾರೆ. ಅನಂತರ ಗೃಹಿಣಿಯು ಬಂದು ತಂಬಿಗೆ ನೀರನ್ನು ತಂದು ಅತಿಥಿಯ ಮುಂದಿಟ್ಟು ನಮಸ್ಕರಿಸಿ ಹೋಗು ತ್ತಾಳೆ. ಈ ಪದ್ಧತಿ ಈಗಲೂ ಕೆಲವು ಪ್ರದೇಶದಲ್ಲಿದೆ. ಒಂದು ವೇಳೆ ಗೃಹಸ್ಥನು ಬಡವನಾಗಿದ್ದು ಅತಿಥಿಯನ್ನು ಉಪಚರಿಸಲು ಅಶಕ್ತನಾದರೆ ಏನು ಮಾಡಬೇಕು? ಧರ್ಮಶಾಸ್ತ್ರ ಹೇಳುತ್ತದೆ.

**ತೃಣಾನಿ ಭೂಮಿರುದಕಂ ವಾಕ್ ಚತುರ್ಥೀ ಚ ಸೂನೃತಾ।**
**ಏನಾನಿತುಸತಾಂ ಗೇಹೇ ನ ಕ್ಷೀಯಂತೇ ಕದಾಚನ ॥**

ಕುಳಿತುಕೊಳ್ಳಲು ಹುಲ್ಲಿನ ಚಾಪೆ, ನೆಲ, ನೀರು, ನಾಲ್ಕನೆಯ ದಾಗಿ ಒಂದು ಒಳ್ಳೆಯ ಮಾತು. ಇವು ಸಜ್ಜನರ ಮನೆಗಳಲ್ಲಿ ಎಂದೂ ಇಲ್ಲದೆ ಹೋಗುವುದಿಲ್ಲ.

"**ಮಾತೃದೇವೋ ಭವ**" ಎಂಬುದು ಇನ್ನೊಂದು ವಾಕ್ಯ. ಇಲ್ಲಿಯೂ ತಾಯಿಯನ್ನು ದೇವಿಯನ್ನು ಪೂಜಿಸುವಂತೆ ಗೌರವಿಸು ಎಂದು ವಾಕ್ಯಾರ್ಥ. ನವಮಾಸಗಳವರೆಗೆ ಗರ್ಭ ವನ್ನು ಹೊತ್ತು ತನ್ನ ರಕ್ತದಿಂದಲೇ ಆ ಮಗುವನ್ನು ತಾಯಿ ಪೋಷಿಸಿರುತ್ತಾಳೆ. ಅನಂತರ ವರ್ಣಿಸಲು ಅಶಕ್ಯವಾದ ಯಾತನೆಯನ್ನು ಅನುಭವಿಸುತ್ತಾ ಪ್ರಸವಿಸಿ ವಾತ್ಸಲ್ಯದಿಂದ ಸಾಕುತ್ತಾಳೆ. ವರ್ಷಗಟ್ಟಲೆ ಆ ಮಗುವಿನೊಡನೆ ಕೊಳಕು ಹಾಸಿಗೆಯಲ್ಲಿ ಮಲಗಿ ನಿದ್ರೆಗೆಟ್ಟು ಮಗುವನ್ನು ಸಾಕುತ್ತಾಳೆ. ಆ ಶಿಶು ದೊಡ್ಡದಾಗುವವರೆಗೂ ಅವಳ ಪ್ರೀತಿಯ ಪಾಲನಾ ಕಾರ್ಯ ಒಂದೇ ಸಮನೆ ನಡೆದೇ ಇರುತ್ತದೆ. ಇಷ್ಟು ಉಪಕಾರವನ್ನು ಮಾಡಿರುವ ತಾಯಿ ಪುತ್ರನಿಗೆ ಪ್ರತ್ಯಕ್ಷ ದೇವತೆ ಯಲ್ಲದೇ ಇನ್ನೇನಾದಾಳು? ಅವಳು ಬದುಕಿರುವವರೆಗೂ ಆಕೆಯ ಸೇವೆಯನ್ನು ಮಾಡಿದರೂ ಮಾತೃಋಣವು ತೀರುವು ದಿಲ್ಲ. ಕಾರಣಾಂತರದಿಂದ ಪುತ್ರನು ದುಷ್ಟನಾಗಿ ಅವಳನ್ನು ದ್ವೇಷಿಸಬಹುದು. ಆದರೆ ತಾಯಿಯಾದವಳು ಹಡೆದ ಮಗನಿಗೆ ಎಂದೂ ಕೇಡನ್ನು ಬಯಸುವುದಿಲ್ಲ. ಆದ್ದರಿಂದಲೇ ಶ್ರೀ ಶಂಕರಾಚಾರ್ಯರು "**ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ**" ಎಂದು ಹೇಳಿದ್ದಾರೆ. ತಾವು ಸಂನ್ಯಾಸಿಗಳಾದರೂ ತಾಯಿಯ ಅನಾರೋಗ್ಯದ ವಿಷಯವನ್ನು ತಿಳಿದು, ಸ್ವಗ್ರಾಮವಾದ ಕಾಲಟಿಗೆ ಧಾವಿಸಿ ಬಂದರು. ತಾಯಿ ಆರ್ಯಾಂಬೆ ಮರಣ ಹೊಂದರಾಗಿ ದಾಯಾದಿಗಳು ಯಾರೂ ಅವಳ ಉತ್ತರ ಕ್ರಿಯೆಯನ್ನು ಮಾಡಲು ಬರಲಿಲ್ಲ. ಇದರಿಂದ ತುಂಬ ಬೇಸರಗೊಂಡ ಆಚಾರ್ಯರು ತಾಯಿಯ ಉತ್ತರ ಕ್ರಿಯೆಯನ್ನು ಸ್ವತಃ ತಾವೇ ಮಾಡಿದರು. ಸಂನ್ಯಾಸ ಧರ್ಮಕ್ಕೆ ಇದು ವ್ಯತಿರಿಕ್ತವಾದರೂ ಅದನ್ನು ಮಾತೃಗೌರವದಿಂದ ಲೆಕ್ಕಿಸಲಿಲ್ಲ. ಮನುಸ್ಮೃತಿಯಲ್ಲಿ "**ಪಿತು ರ್ದಶಗುಣಂ ಮಾತಾ ಗೌರವೇಣಾತಿರಿಚ್ಯತೇ**" ಎಂದು ಹೇಳಿದ್ದಾರೆ. ತಂದೆಗಿಂತ ಹತ್ತರಷ್ಟು ಗೌರವವು ತಾಯಿಗೆ ಸಲ್ಲುತ್ತದೆ ಎಂದು ಅದರ ಅಭಿಪ್ರಾಯ. ಆದ್ದರಿಂದಲೇ ಸಂನ್ಯಾಸಿಯಾದ ಪುತ್ರನಿಗೆ ತಾಯಿ ನಮಸ್ಕರಿಸಕೂಡದೆಂದು ಸಂನ್ಯಾಸಿಯೇ ತಾಯಿಗೆ ನಮಸ್ಕರಿಸಬೇಕೆಂದೂ ಶಿಷ್ಟಾಚಾರ ವಿದೆ. ಹೀಗೆ ಮಾತೃ ಸೇವೆಯೆಂಬುದು ಭಾರತೀಯರ ಒಂದು ಉತ್ತಮ ಸಂಸ್ಕೃತಿಯಾಗಿದೆ. ಹೀಗೆಯೇ '**ಪಿತೃದೇವೋಭವ, ಆಚಾರ್ಯ ದೇವೋ ಭವ**' ಎಂಬ ವಾಕ್ಯಗಳಿಗೂ ಅರ್ಥ ಮಾಡಿಕೊಳ್ಳಬೇಕು. ವೃದ್ಧರಾದ ಮಾತಾಪಿತೃಗಳ ಸೇವೆ, ಅವರ ಪೋಷಣೆ ಮುಂತಾದ ಕರ್ತವ್ಯಗಳನ್ನು ಮಕ್ಕಳು ಮಾಡಬೇಕು ಎಂಬುದು ಉತ್ತಮವಾದ ಸಂಸ್ಕೃತಿಯ ಲಕ್ಷಣ. ಈಗಲೂ ಈ ಪದ್ಧತಿಯನ್ನು ನಮ್ಮ ದೇಶದಲ್ಲಿ ಯಥೇಚ್ಛವಾಗಿ ಕಾಣ ಬಹುದು. ಈಗಿನ ವಿಜ್ಞಾನ ಪೋಷಿತವಾದ ನವನಾಗರಿಕತೆ ಹುಟ್ಟಿದ ಮೇಲೆ ವೃದ್ಧಾಶ್ರಮಗಳು ಅಲ್ಲಲ್ಲಿ ಹುಟ್ಟಿಕೊಂಡವು. ಇದೊಂದು ಉದಾಹರಣೆ.

ಉಪಾಧ್ಯಾಯರನ್ನು ಭಕ್ತಿಯಿಂದ ಗೌರವಿಸುವುದು ಶಿಷ್ಯರ ಕರ್ತವ್ಯವಾಗಿದೆ. ಗುರುವು ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕನಾಗಿರಬಹುದು. ಶಿಷ್ಯನು ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಿ ಪದವೀಧರನಾಗಿ ದೊಡ್ಡ ಹುದ್ದೆಯನ್ನು ಅಲಂಕರಿಸಿರಬಹುದು. ಆದರೂ ಪ್ರಾಥಮಿಕ ಶಾಲೆಯಲ್ಲಿ ಅಕ್ಷರಾಭ್ಯಾಸ ಮಾಡಿಸಿ ಜ್ಞಾನದ್ವಾರವನ್ನು ತೆರೆಸಿಕೊಟ್ಟವನು ಪ್ರಾಥಮಿಕ ಶಾಲೆಯ ಉಪಾಧ್ಯಯನೇ. ಆತನಿಗೆ ಪದವೀಧರ ನಿಂದಲೂ ಗೌರವ ಸಲ್ಲಬೇಕು. ಹಾಗೆ ಸಲ್ಲುತ್ತಿರುವುದನ್ನು ನಮ್ಮ ಭಾರತ ದೇಶದಲ್ಲಿ ಅಲ್ಲಲ್ಲಿ ನೋಡಬಹುದು.

ವೇದವು '**ಸತ್ಯಂ ವದ ಧರ್ಮಂ ಚರ**' ಮುಂತಾದ ಹಲವಾರು ಉಪದೇಶಗಳನ್ನು ಜನತೆಗಾಗಿ ನೀಡಿದೆ. ಇದೇ ನೀತಿ ದೇಶಾಂತರಗಳಲ್ಲಿಯೂ ಹರಡಿರುತ್ತದೆ. ಭಾರತೀಯರಿಂದ ಈ ನೀತಿಯನ್ನು ವಿದೇಶಿಯರು ಕಲಿತುಕೊಂಡಿರಬಹುದು. ಮನುಸ್ಮೃತಿಯಲ್ಲಿ

**ಏತದ್ದೇಶಪ್ರಸೂತಸ್ಯ ಸಕಾಶಾದಗ್ರಜನ್ಮನಃ।**
**ಸ್ವಂ ಸ್ವಂ ಚರಿತ್ರಂ ಶಿಕ್ಷೇರನ್ ಪೃಥಿವ್ಯಾಂ ಸರ್ವಮಾನವಾಃ॥**

ಎಂಬ ಉಪದೇಶವು ದೊರೆಯುತ್ತದೆ. " **ಈ ಭಾರತದೇಶದಲ್ಲಿ ಹುಟ್ಟಿದ ಬ್ರಾಹ್ಮಣನಿಂದ ಜಗತ್ತಿನಲ್ಲಿರುವ ಎಲ್ಲ ಮನುಷ್ಯರೂ ತಮ್ಮ ತಮ್ಮ ನಡತೆಗಳನ್ನು ಕಲಿತುಕೊಳ್ಳಬೇಕು**" ಎಂದು ಈ ಶ್ಲೋಕದ ತಾತ್ಪರ್ಯ. ಈವೊಂದು ಮಾನವ ಸಂಸ್ಕೃತಿಯು ನಾನಾ ರೂಪದಲ್ಲಿ ಈಗ ದೊರೆಯುತ್ತಿರುವುದಕ್ಕೆ ವೇದವೇ ಮೂಲವೆಂದು ಹೇಳಬಹುದು. ಸತ್ಯಮಾರ್ಗ, ಗುರುಹಿರಿಯರಲ್ಲಿ ವಿಧೇಯತೆ, ಪರೋಪಕಾರ, ಅಹಿಂಸೆ ಮುಂತಾದವು ಮಾನವನ ಚಿತ್ತ ಸಂಸ್ಕಾರದ ಫಲವೆಂಬುದು ಸ್ಪಷ್ಟವಾಗಿದೆ. ಚಿತ್ತ ಸಂಸ್ಕಾರವು ಸ್ವತಃ ಬರತಕ್ಕದ್ದಲ್ಲ. ಡಾರ್ವಿನ್ನನ ವಿಕಾಸವಾದದಂತೆ ಮನುಷ್ಯನು ಕ್ರಮವಾಗಿ ಉತ್ತಮ ಸಂಸ್ಕಾರವನ್ನು ಪಡೆದು ಸತ್ಪುರುಷನಾಗುತ್ತಾನೆ ಎಂಬುದು ವಿಶ್ವಸನೀಯವಲ್ಲ. ಇಂದಿಗೂ ಜನಸಂಪರ್ಕವಿಲ್ಲದ ಕಾಡು ಜನರು ಭಾರತ, ಆಫ್ರಿಕಾ, ದಕ್ಷಿಣ ಅಮೇರಿಕಾ ಮುಂತಾದ ದೇಶಗಳಲ್ಲಿ ಕಂಡು ಬರುತ್ತಾರೆ. ಅವರ ಬಾಳು ಮಂಗಗಳ ಬಾಳಿನಂತೆ ಇದೆಯೇ ಹೊರತು ಶಿಷ್ಟನಾದ ಒಬ್ಬ ನಾಗರಿಕನ ಬಾಳಿನಂತೆ ಇಲ್ಲ. ವಿಕಾಸವಾದದಂತೆ ಅವರೇಕೆ ಇನ್ನೂ ವಿಕಾಸಗೊಂಡಿಲ್ಲ? ಎಂಬ ಪ್ರಶ್ನೆಗೆ ಸರಿಯಾದ ಉತ್ತರ ದೊರೆಯುವುದಿಲ್ಲ.

ಇನ್ನು ನಮ್ಮ ಸಂಸ್ಕೃತಿಯನ್ನು ರೂಪಿಸಿದವು ರಾಮಾಯಣಾದಿ ಗ್ರಂಥಗಳು. ಹಾಗೆಯೇ ಸುಭಾಷಿತ ಗ್ರಂಥಗಳು. ಕಾಳಿದಾಸಾದಿ ಮಹಾಕವಿಗಳ ಕಾವ್ಯಗಳೂ ಸಹ ವೈದಿಕ ಸಂಸ್ಕೃತಿಯನ್ನು ವಿಸ್ತರಿಸುವುದಕ್ಕೆ ತುಂಬ ಸಹಾಯ ಮಾಡಿರುತ್ತವೆ. ಕಾವ್ಯದ ಉದ್ದೇಶಗಳಲ್ಲಿ "**ಕಾಂತಾಸಂಮಿತತಯಾ ಉಪದೇಶಯುಜೇ**" ಎಂಬ ಅಲಂಕಾರಿಕರ ನುಡಿಯು ಇದಕ್ಕೆ ಸಾಕ್ಷಿಯಾಗಿದೆ.

**ಅಜ್ಞಾನಾದ್ಯದಿ ವಾ ಜ್ಞಾನಾತ್ಕೃತ್ವಾ ಕರ್ಮ ವಿಗರ್ಹಿತಂ । ತಸ್ಮಾದ್ವಿಮುಕ್ತಿಮನ್ವಿಚ್ಛನ್ ದ್ವಿತೀಯಂ ನ ಸಮಾಚರೇತ್ ॥**

(ಮನುಸ್ಮೃತಿ, 11-232)

ತಿಳಿದಾಗಲೀ ತಿಳಿಯದೇ ಆಗಲಿ ನಿಂದಿತವಾದ ಕರ್ಮವನ್ನು ಮಾಡಿದಮೇಲೆ, ಆ ಪಾಪಕರ್ಮದಿಂದ ಬಿಡುಗಡೆಯಾಗಬೇಕಾದರೆ ಮತ್ತೊಮ್ಮೆ ಅಂಥ ಕೆಲಸವನ್ನು ಮಾಡಬಾರದು.

---

**ಅತಿವಾದಾಂಸ್ತಿತಿಕ್ಷೇತ ನಾವಮನ್ಯೇತ ಕಂಚನ । ನಚೇಮಂ ದೇಹಮಾಶ್ರಿತ್ಯ ವೈರಂ ಕುರ್ವೀತ ಕೇನಚಿತ್ ॥**

(ಮನುಸ್ಮೃತಿ, 6-87)

ಬೇರೆಯವರು ಅತಿಕ್ರಮಿಸಿ ಮಾತನಾಡಿದರೂ ಸಹಿಸಬೇಕು. ಯಾರನ್ನೂ ಅವಮಾನಗೊಳಿಸಬಾರದು. ಅನಿಶ್ಚಿತವಾದ ಈ ಶರೀರಕ್ಕಾಗಿ ಯಾರೊಡನೆಯೂ ಹಗೆತನವಿರಬಾರದು.

---

**ಅತಿಸಾಹಸಮತಿದುಷ್ಕರಮತ್ಯಾಶ್ಚರ್ಯಂ ಚ ದಾನಮರ್ಥಾನಾಂ। ಯೋ ಹಿ ದದಾತಿ ಶರೀರಂ ನ ದದಾತಿ ಸ ವಿತ್ತಲೇಶಮಪಿ ॥**

ಸುಭಾಷಿತಸುಧಾನಿಧಿ (ಕಲಾವಿಲಾಸ)

ಹಣವನ್ನು ದಾನಮಾಡುವುದು ದೊಡ್ಡ ಸಾಹಸ, ಅತ್ಯಂತ ಕಠಿಣವಾದ ಕೆಲಸ ಇದು; ಇದು ಅತ್ಯಂತ ಆಶ್ಚರ್ಯಕರವಾದುದು. ಏಕೆಂದರೆ, ತನ್ನ ದೇಹವನ್ನಾದರೂ ಒಬ್ಬನು ತ್ಯಜಿಸಿಯಾನು, ಸ್ವಲ್ಪ ಹಣವನ್ನು ಮಾತ್ರ ಅವನು ಕೊಡುವುದಿಲ್ಲ.

---

**ಅಂಧಃ ಸ ಏವ ಶ್ರುತವರ್ಜಿತೋ ಯಃ ಶಠಃ ಸ ಏವಾರ್ಥಿನಿರರ್ಥಕೋ ಯಃ ।**
**ಮೃತಃ ಸ ಏವಾಸ್ತಿ ಯಶೋ ನ ಯಸ್ಯ ಧರ್ಮೇ ನ ಧೀರ್ಯಸ್ಯ ಸ ಏವ ಶೋಚ್ಯಃ ॥**

(ಚತುರ್ವರ್ಗಸಂಗ್ರಹ, 1-8)

ವಿದ್ಯೆ ಇಲ್ಲದವನೇ ಕುರುಡ. ಯಾಚಕರಿಗೆ ಏನನ್ನೂ ಕೊಡದವನೇ ದುಷ್ಟ. ಕೀರ್ತಿಯನ್ನು ಗಳಿಸದವನು ಮೃತನೇ ಸರಿ. ಧರ್ಮದಲ್ಲಿ ಯಾರಿಗೆ ಆಸಕ್ತಿ ಇಲ್ಲವೋ ಅವನು ಶೋಚನೀಯ.

---

**ಅನಿತ್ಯಾನಿ ಶರೀರಾಣಿ ವಿಭವೋ ನೈವ ಶಾಶ್ವತಃ । ನಿತ್ಯಂ ಸಂನಿಹಿತೋ ಮೃತ್ಯುಃ ಕರ್ತವ್ಯೋ ಧರ್ಮಸಂಗ್ರಹಃ ॥**

(ಸ್ವಯೋಚಿತ ಪದ್ಯಮಾಲಿಕಾ)

ದೇಹಗಳು ನಶ್ವರವಾದವು. ಸಂಪತ್ತು ಶಾಶ್ವತವಲ್ಲ. ಮೃತ್ಯು ಸದಾ ಸಮೀಪದಲ್ಲೇ ಇರುತ್ತದೆ. ಆದ್ದರಿಂದ ಒಳ್ಳೆಯ ಕೆಲಸವನ್ನು ಹೆಚ್ಚಾಗಿ ಮಾಡಬೇಕು.


SJR GROUP

www.sjrgroup.com

Live free.

# With Best Compliments
# SJR GROUP

commercial . residential . retail . hospitality



SJR Group, SJR Primus, #1, Koramangala Industrial Area, Bangalore 560095, India
CALL 4120 1111, 99807 99901, 98807 99911 or email sales@sjrgroup.com.